# ವಿತ್ತೀಯ ಕಾರ್ಯನೀತಿ ಸಂಸ್ಥೆಯ

## ಅಧ್ಯಾಯ-1

## 1. ಪೀಠಿಕೆ

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಕರ್ನಾಟಕ ಸರ್ಕಾರದಿಂದ 2007ರಲ್ಲಿ ಸ್ಥಾಪಿಸಲ್ಪಟ್ಟಿದೆ. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ-2002 (ಕ.ವಿ.ಹೊ.ಅ.) ಅಕ್ಷರಶಃ ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ಸಾಂಸ್ಥೀಕರಣಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಹೊಂದಿರುವ ಬದ್ಧತೆಯ ಮನೋಭಾವವನ್ನು ವಿತ್ತೀಯ ಕಾರ್ಯನೀತಿ ಸಂಸ್ಥೆಯ ಸ್ಥಾಪನೆಯು ಎತ್ತಿ ತೋರಿಸುತ್ತದೆ. ತನ್ಮೂಲಕ ಈ ಮುಂದಿನ ಕಾರ್ಯಗಳಲ್ಲಿ ಕರ್ನಾಟಕ ಸರ್ಕಾರಕ್ಕೆ ನೆರವಾಗುವುದಕ್ಕಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು (ವಿತ್ತೀಯ ಕಾರ್ಯನೀತಿ ಸಂಸ್ಥೆ) ಸ್ಥಾಪಿಸಲಾಗಿರುತ್ತದೆ, ಅವುಗಳೆಂದರೆ:

- ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ "ತಿಳುವಳಿಕೆಯುಳ್ಳ" ನಿರ್ಣಯ ಕೈಗೊಳ್ಳುವಿಕೆಯನ್ನು ವೃದ್ಧಿಸಲು;
- ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಸಮಂಜಸ ಮತ್ತು ಪಾರದರ್ಶಕ ತತ್ವಗಳನ್ನು ಅನುಸರಿಸುವ ಮೂಲಕ ಆರ್ಥಿಕ ಆಡಳಿತದಲ್ಲಿ ಹೆಚ್ಚಿನ ಉತ್ತರದಾಯಿತ್ವ ಮತ್ತು ಪಾರದರ್ಶಕತೆಗಳನ್ನು ಸಾಧಿಸುವುದನ್ನು ಖಚಿತಪಡಿಸಿಕೊಳ್ಳುವುದು;
- ಸಂಬಂಧಪಟ್ಟ ಸಂಸ್ಥೆಗಳ ಸಾಮರ್ಥ್ಯವನ್ನು ನಿರಂತರವಾಗಿ ಮೇಲ್ದರ್ಜೆಗೇರಿಸುವ ಮೂಲಕ ವಿತ್ತೀಯ ತಿದ್ದುಪಡಿ ಕ್ರಮವನ್ನು ಸುಸ್ಥಿರಗೊಳಿಸುವುದು.

### 1.1 ದೂರದೃಷ್ಟಿ

ಸಾರ್ವಜನಿಕ ಹಣಕಾಸು ನಿರ್ವಹಣೆಯಲ್ಲಿ ತೊಡಗಿರುವ ಮಾನವ ಬಂಡವಾಳದ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಇದರ ಪ್ರತಿಫಲವಾಗಿ, ಅವರ ದಕ್ಷತೆ ಹೆಚ್ಚಿಸುವ ಮೂಲಕ ವಿವೇಕಯುತ ವಿತ್ತೀಯ ನಿಬಂಧನೆಗಳಿಗೆ ಬದ್ಧರಾಗುವ ಮತ್ತು ನಾಗರೀಕರ ಹಣದ ಮೌಲ್ಯವನ್ನು ಖಚಿತಪಡಿಸುವ ಸ್ವಭಾವವನ್ನು ವೃದ್ಧಿಸುವುದು ವಿತ್ತೀಯ ಕಾರ್ಯನೀತಿ ಸಂಸ್ಥೆಯ ದೃಷ್ಟಿಕೋನವಾಗಿರುತ್ತದೆ.

### 1.2 ಗುರಿ

ವಿತ್ತೀಯ ಹೊಣೆಗಾರಿಕೆಯ ಪ್ರಜ್ಞೆಯನ್ನು ಮೂಡಿಸುವ ಮೂಲಕ, ಹೊಂದಿಕೆಯಾಗುವ ಕಾರ್ಯಪದ್ಧತಿಗಳನ್ನು ವ್ಯಾಪಕವಾಗಿ ಅಳವಡಿಸಿ ಸರ್ಕಾರದ ಒಳಗಿರುವ ಮತ್ತು ಹೊರಗಿರುವ ಬಳಕೆದಾರರಿಗೆ ನ್ಯಾಯಸಮ್ಮತ ಮತ್ತು ಕೈಗೆಟಕುವ ವೆಚ್ಚದಲ್ಲಿ ತನ್ನ ಸೇವೆಗಳನ್ನು ಒದಗಿಸುವುದು ಹಾಗೂ ಈ ಮೂಲಕ ಎಲ್ಲಾ ಸರ್ಕಾರಿ ವಲಯದ ಆಡಳಿತ ಘಟಕಗಳಿಗೆ ಸಂಬಂಧಿಸಿದ ಸಮಾಲೋಚನಾ ಮತ್ತು ನಿರ್ವಹಣಾ ವಿಷಯಗಳಿಗೆ ಸಂಬಂಧಿಸಿದಂತೆ 'ಉಲ್ಲೇಖಿಸಲ್ಪಡುವ ಪ್ರಥಮ ಸಂಸ್ಥೆಯಾಗುವಂತೆ ತನ್ನನ್ನು ರೂಪಿಸಿಕೊಳ್ಳುವುದು' ವಿತ್ತೀಯ ಕಾರ್ಯನೀತಿ ಸಂಸ್ಥೆಯ ಗುರಿಯಾಗಿದೆ.